**Com.O.S.** 21/2025
**PW**-1

**ಸಾಕ್ಷಿಯನ್ನು ದಿನಾಂಕ 24.2.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಬಿ.ಎಸ್.ಎನ್.ಪಿ ವಕೀಲರಿಂದಃ**

ನನಗೆ ಈ ಕೇಸಿನ ಬಗ್ಗೆ ಪೂರ್ಣ ಮಾಹಿತಿ ಇದೆ. ದಾವಆಸ್ತಿಯ ಕುರಿತು 45 ವರ್ಷಕ್ಕೆ ಲೀಸ್ ಡೀಡ್ ನೋಂದಣಿ ಮಾಡಿಸಿಕೊಡುವಂತೆ ಈ ದಾವೆ ಹಾಕಿದ್ದೇವೆ. ದಾವೆಯಲ್ಲಿ ಹಾಜರುಪಡಿಸಿರುವ ದಾಖಲೆ ಬಿಟ್ಟು ನನ್ನ ಬಳಿ ಬೇರೆ ದಾಖಲೆ ಇಲ್ಲ ಎಂದರೆ ನಿಜ. ಪ್ರತಿವಾದಿಗಳ ಪ್ರತಿವಾದ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದ ಪತ್ರದ ವಿಷಯಗಳನ್ನು ತಿಳಿದುಕೊಂಡಿದ್ದೀರಾ ಎಂದರೆ ತಿಳಿದುಕೊಳ್ಳಲು ಏನು ಇಲ್ಲ. ಪ್ರತಿವಾದಿಗಳಿಗೆ ಹಣ ನೀಡಿದ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ಹಣ ಪಾವತಿಸಲು ನಾನು ನೀಡಿದ್ದ ಚೆಕ್ ಹಣ ಪಾವತಿಯಾಗಿದೆ. ಆ ಬಗ್ಗೆ ದಾಖಲೆ ಇದೆ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. 2008 ರ ನೋಟಿಸ್ ಬಳಿಕವೂ ಪ್ರತಿವಾದಿಗಳ ಜೊತೆ ಪತ್ರ ವ್ಯವಹಾರವಾಗಿದೆ. ಆ ಪತ್ರ ವ್ಯವಹಾರದ ಬಗ್ಗೆ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ. ನಾನು ಪ್ರತಿವಾದಿಗಳನ್ನು ಭೇಟಿ ಮಾಡಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಕೆಮಿಸ್ಟ್ರಿ ಪ್ರೋಪೆಷರ್ ಆಗಿದ್ದು ಸರ್ಕಾರಿ ಕಾಲೇಜಿನಲ್ಲಿ ಬೇರೆ ಬೇರೆ ಊರುಗಳಲ್ಲಿ ಕೆಲಸ ಮಾಡಿದ್ದಾರೆ ಎಂದರೆ ನಿಜ. 3 ರಿಂದ 5 ನೇ ಪ್ರತಿವಾದಿಗಳು 2 ನೇ ಪ್ರತಿವಾದಿ ಎಲ್ಲೆಲ್ಲಿ ಕೆಲಸ ಮಾಡುತ್ತಿದ್ದರೋ ಅಲ್ಲಲ್ಲಿ ವಾಸವಿರುತ್ತಿದ್ದರು ಎಂದರೆ ಗೊತ್ತಿಲ್ಲ. 2 ನೇ ಪ್ರತಿವಾದಿಗೆ ಕಳುಹಿಸಿದ್ದ ನೋಟಿಸ್ ಅವರಿಗೆ ತಲುಪಿಲ್ಲ ಎಂದರೆ ಸರಿಯಲ್ಲ. ನೋಟಿಸ್ ಕಳುಹಿಸಿದಾಗ ಅವರು ಕೆ.ಆರ್.ನಗರದಲ್ಲಿ ವಾಸವಿದ್ದರು ಎಂದರೆ ಗೊತ್ತಿಲ್ಲ. 2 ರಿಂದ 5 ನೇ ಪ್ರತಿವಾದಿಗಳು

ನೋಟಿಸ್ ಕಳುಹಿಸಿದ್ದ ವಿಳಾಸದಲ್ಲಿ ವಾಸವಿಲ್ಲದ್ದರಿಂದ ನಿಪಿ3 ರಿಂದ 14 ರ ನೋಟಿಸುಗಳು ಅವರಿಗೆ ತಲುಪಿಲ್ಲ ಎಂದರೆ ನನಗೆ ಗೊತ್ತಿಲ್ಲ. ನೋಟಿಸ್ ಜಾರಿಯಾಗದಿದ್ದರಿಂದ 2 ರಿಂದ 5 ನೇ ಪ್ರತಿವಾದಿಗಳಿಗೆ ಈ ದಾವೆಯ ನೋಟಿಸ್ ಬಗ್ಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

ನಾನು ಮೊದಲಿಗೆ ಓ.ಎಸ್ 328/2009 ರಂತೆ ದಾವೆ ಹಾಕಿದ್ದೆ ಎಂದರೆ ನಿಜ. ಯಾವುದೇ ಆಧಾರವಿಲ್ಲದೆ ಆ ದಾವೆ ಹಾಕಿದ್ದೆ ಎಂದರೆ ಸರಿಯಲ್ಲ. ಆ ದಾವೆಯನ್ನು ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲವೆಂದು ವಜಾ ಮಾಡಿದರು ಎಂದರೆ ನಿಜ. ನಂತರ ಎಂ.ಎ 7/2014 ರಂತೆ 2 ನೇ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅಪೀಲು ಹಾಕಿದ್ದೆ ಎಂದರೆ ನಿಜ. ಆ ಅಪೀಲು ವಜಾ ಅಗಿದೆ ಎಂದರೆ ಗೊತ್ತಿಲ್ಲ. ನಂತರ ನಾನು ಸರಿಯಾದ ನ್ಯಾಯಾಲಯದ ಶುಲ್ಕ ಕಟ್ಟಿದ್ದರಿಂದ ಓ.ಎಸ್ 373/2017 ರಂತೆ ನೋಂದಣಿಯಾಯಿತು ಎಂದರೆ ನಿಜ. 1997 ರಿಂದ 2017 ರ ಮಧ್ಯದಲ್ಲಿ ಪ್ರತಿವಾದಿಗಳು ಬೇರೆಯವರ ಜೊತೆ ಆಸ್ತಿ ಕುರಿತು ವ್ಯವಹಾರ ಮಾಡಿದ್ದರು ಮತ್ತು ಆ ಆಸ್ತಿ ಕುರಿತು ವ್ಯಾಜ್ಯ ಪ್ರಾರಂಭವಾಯಿತು ಎಂದರೆ 2007 ರಲ್ಲಿ ಯಾದವ ಸಂಘದವರು ಕೇಸ್ ಹಾಕಿದ್ದರು, ಆದರೆ ಅದು ವಜಾ ಆಗಿದೆ. ನಿಪಿ15 ವಾದಿ ಸಂಸ್ಥೆಯ ಪಾಲು ವಿಭಾಗ ಪತ್ರ ಇದೆ. ಅದು ಈ ಪ್ರಕರಣಕ್ಕೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ18 ಒಬ್ಬ ಪಾಲುದಾರರು ರೀಲಿಸ್ ಆದ ಬಗ್ಗೆ ದಾಖಲೆ ಇದೆ. ನಿಪಿ18 ರ ಬಳಿಕ ನಿಪಿ20 ರಂತೆ ಪಾಲುದಾರಿಕೆ ಸಂಸ್ಥೆ ಮರು ನಿರ್ಮಾಣವಾಗಿದೆ. ದಿನಾಂಕ 4.11.1996 ರಂದು ವಿಶ್ವೇಶ್ವರ ಇವರು ತಮ್ಮ ಪಾಲಿನ ಹಣ 45,000/- ಗಳನ್ನು ಪಡೆದುಕೊಂಡು ಪಾಲುದಾರಿಕೆಯಿಂದ ಹೊರ ಹೋದರು ಎಂದರೆ ನಿಜ. ಅವರು ಹೊರ ಹೋದ ಬಳಿಕ ನಮ್ಮ ಸಂಸ್ಥೆಯಲ್ಲಿ ನಿಪಿ17 ರ ಪ್ರಕಾರ 1.80 ಲಕ್ಷ ರೂ. ಬಂಡವಾಳ ಇತ್ತು ಎಂದರೆ ನಿಜ. ಆ ಕಾರಣಕ್ಕೆ ಪ್ರತಿವಾದಿಗಳಿಗೆ 2.50 ಲಕ್ಷ ಮತ್ತು

7.50 ಲಕ್ಷ ನೀಡಿದ್ದೇವೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ವಿಜಯ ಬ್ಯಾಂಕ್ ಖಾತೆ ಮೂಲಕ 2.50 ಲಕ್ಷ ಮುಂಗಡ ಮತ್ತು ಅವರು ಸಹಿ ಮಾಡಿದ ಬಳಿಕ 7.50 ಲಕ್ಷವನ್ನು ಪಾವತಿ ಮಾಡಿದ್ದೇವೆ. ಆ ಹಣವನ್ನು ತುಂಗಬಾಯಿ ಇವರ ವಿಜಯ ಬ್ಯಾಂಕ್, ಮುಡಾ ಶಾಖೆ ಖಾತೆಗೆ ಪಾವತಿ ಮಾಡಿದ್ದೇವೆ. ಆದರೆ ಪಾವತಿ ಮಾಡಿದ ದಿನಾಂಕ ನೆನಪಿಲ್ಲ. ಅಗ್ರಿಮೆಂಟಿಗೆ ಸಹಿ ಮಾಡುವ ಮುಂಚೆ ಆ ಹಣವನ್ನು ಪಾವತಿ ಮಾಡಿದ್ದೇವೆ. ನಿಪಿ3 ರಿಂದ 17 ನೋಟಿಸಿನಲ್ಲಿ ಹಣ ಪಾವತಿ ಮಾಡಿದ ಬಗ್ಗೆ ನಮೂದಿಲ್ಲ ಎಂದರೆ ನನಗೆ ನೆನಪಿಲ್ಲ. ನಾನು ಪ್ರತಿವಾದಿಗಳಿಗೆ ಹಣ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರದಲ್ಲಿ ಹೇಳಿರುವ ಎಲ್ಲ ವಿಷಯ ಸುಳ್ಳು ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಕೇಳಿರುವ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನಗೆ ಯಾವುದೇ ಹಣ ನೀಡಬೇಕಾಗಿಲ್ಲ ಎಂದರೆ ಸರಿಯಲ್ಲ.

1 ರಿಂದ 8 ನೇ ಪ್ರತಿವಾದಿಯರು ಅವರ ಮನೆಯಲ್ಲಿ ದಾವಆಸ್ತಿ ಇರುವ ಬಗ್ಗೆ ಹೇಳಿದರು. ದಿನಾಂಕ 14.6.1996 ರಂದು ಆ ಬಗ್ಗೆ ಹೇಳಿದರು. ಪ್ರತಿವಾದಿಗಳೇ ದಾವಆಸ್ತಿಯನ್ನು ಲೀಸ್ ಗೆ ಕೊಡುವುದಾಗಿ ನನಗೆ ಹೇಳಿದರು. ಪ್ರತಿವಾದಿಗಳು ಯಾವತ್ತೂ ನನಗೆ ಆ ಬಗ್ಗೆ ಹೇಳಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನಗೆ ಯಾವುದೇ ಅಗ್ರಿಮೆಂಟ್ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಅಗ್ರಿಮೆಂಟಿನ ಟರ್ಮ್ಸ್ ಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಅಷ್ಟೊತ್ತಿಗಾಗಲೇ ದಾವಆಸ್ತಿಯ ಕುರಿತು ದಾವೆ ಇದುದ್ದರಿಂದ ಅವರು ನನಗೆ ಅಗ್ರಿಮೆಂಟ್ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಯಾವತ್ತು 10 ಲಕ್ಷಗಳನ್ನು ಎರಡು ಕಂತುಗಳಲ್ಲಿ ಪಡೆದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಹೆಚ್ಚಿನ ಹಣ ಕೇಳುವುದಿಲ್ಲವೆಂದು ಹೇಳಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಣ ಪಾವತಿ ಮಾಡಿದ ಬಗ್ಗೆ

ಪ್ರತ್ಯೇಕ ವೋಚರ್ ಪಡೆದಿಲ್ಲ. ಪ್ರತಿವಾದಿಗಳು 45 ವರ್ಷಗಳಿಗೆ ಲೀಸ್ ಮಾಡಿಕೊಡುವುದಾಗಿ ಒಪ್ಪಿರಲಿಲ್ಲ ಎಂದರೆ ಸರಿಯಲ್ಲ. ಕಟ್ಟಡ ಕಟ್ಟುವುದು ಪೂರ್ಣಗೊಂಡ ಬಳಿಕ 45 ವರ್ಷಕ್ಕೆ ಲೀಸಿಗೆ ಕೊಡುವುದಾಗಿ ಒಪ್ಪಿದ್ದರು. ನಾನು ಕಟ್ಟಡ ಕಟ್ಟಿಲ್ಲ ಎಂದರೆ ಅವರು ನೋಂದಣಿ ಮಾಡಿಕೊಡಲಿಲ್ಲವಾದ್ದರಿಂದ ಮತ್ತು ಆಸ್ತಿಯ ಸ್ವಾಧೀನ ಕೊಡಲಿಲ್ಲವಾದ್ದರಿಂದ ಕಟ್ಟಡ ಕಟ್ಟಿರುವುದಿಲ್ಲ. ಕಟ್ಟಡ ಲೈಸೆನ್ಸನು ಪ್ರತಿವಾದಿಗಳೇ ಪಡೆಯುವುದಾಗಿ ಹೇಳಿದ್ದರು. ನಾನು ಇಂದಿನವರೆಗೆ ಪ್ರತಿವಾದಿಗಳಿಗೆ ಪ್ಲಾನ್ ಮತ್ತು ಲೈಸೆನ್ಸ ಪಡೆದು ನೀಡುವಂತೆ ಲಿಖಿತವಾಗಿ ಕೇಳಿಲ್ಲ ಎಂದರೆ ನೋಂದಣಿ ಮಾಡಿಸಿಕೊಡುವಂತೆ ಕೇಳಿದ್ದೇನೆ ಆದರೆ ಪ್ಲಾನ್ ಮತ್ತು ಲೈಸೆನ್ಸ ಪಡೆದು ನೀಡುವಂತೆ ಕೇಳಿರುವುದಿಲ್ಲ. ಇಂದಿನವರೆಗೆ ನಾನು ದಾವಆಸ್ತಿಯ ಸ್ವಾಧೀನದಲ್ಲಿ ಇಲ್ಲ ಎಂದರೆ ನಿಜ. ಅಗ್ರಿಮೆಂಟ್ ಬಗ್ಗೆ 1997 ರಿಂದ 2007 ರವರೆಗೆ ನನ್ನ ಮತ್ತು ಪ್ರತಿವಾದಿಗಳ ನಡುವೆ ಪತ್ರ ವ್ಯವಹಾರ ನಡೆದಿಲ್ಲ ಎಂದರೆ ನಿಜ. ದಿನಾಂಕ 25.6.2007 ರಂದು ನೋಂದಾಯಿತ ಪತ್ರವನ್ನು ಪ್ರತಿವಾದಿಗಳಿಗೆ ಕಳುಹಿಸಿಲ್ಲ ಎಂದರೆ ಸರಿಯಲ್ಲ. ಅದನ್ನು ಕಳುಹಿಸಿದ ಬಗ್ಗೆ ನನ್ನ ಬಳಿ ಸ್ವೀಕೃತಿ ಪತ್ರ ಇಲ್ಲ ಎಂದರೆ ಸರಿಯಲ್ಲ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. 2 ನೇ ಪ್ರತಿವಾದಿಗೆ ನಾನು ಕಳುಹಿಸಿದ್ದ ಪತ್ರ ತಲುಪಿಲ್ಲವಾದ್ದರಿಂದ ಅವರು ನೋಂದಣಿ ಮಾಡಿಸಿಕೊಡಲು ತಯಾರಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನಿಂದ ಪಡೆದ ಹಣವನ್ನು ಉಪಯೋಗಿಸಿಕೊಂಡಿದ್ದಾರೆ ಎಂದು ಪ್ರಮಾಣಪತ್ರದ 7 ನೇ ಪ್ಯಾರದಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಗಳು ಶೇ.18 ರಷ್ಟು ಬಡ್ಡಿ ಪಾವತಿಸಲು ಯಾವುದೇ ಒಪ್ಪಂದ ಮಾಡಿಕೊಂಡಿಲ್ಲವಾದ್ದರಿಂದ ನಾನು ಅಷ್ಟು ಬಡ್ಡಿಗೆ ಅರ್ಹನಲ್ಲ ಎಂದರೆ ಅವರು ನೋಂದಣಿ ಮಾಡಿಕೊಟ್ಟಿಲ್ಲವಾದ್ದರಿಂದ ಬಡ್ಡಿ ನೀಡಬೇಕಾಗುತ್ತದೆ. ಬಡ್ಡಿ ನೀಡುವ ಬಗ್ಗೆ ಬರವಣಿಗೆಯಾಗಿಲ್ಲ. ದಿನಾಂಕ 14.6.1996 ರ ಅಗ್ರಿಮೆಂಟನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆ ರೀತಿ ಅಗ್ರಿಮೆಂಟ್ ಇಲ್ಲವಾದ್ದರಿಂದ

ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಪ್ರಮಾಣಪತ್ರದ ಪ್ಯಾರ 10 ರಲ್ಲಿ ಕೇಳಿರುವ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ. ನಿಪಿ1 ರಿಂದ 20 ರಲ್ಲಿ ದಿನಾಂಕ 14.6.1996 ರ ಅಗ್ರಿಮೆಂಟ್ ಇಲ್ಲ ಎಂದರೆ ನಾನು ಕೊಟ್ಟಿದ್ದೇನೆ.

ಈ ವೇಳೆಗೆ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು